**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.389/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ನಾಗಸಿಂಹ ಎಸ್. | ಫ್ರಾಸಾ-6 |
| ತಂದೆಯ ಹೆಸರು | : ವೇಣುಗೋಪಾಲ್ ಎಸ್. | ಚಾಸಾ-18 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವೈದ್ಯಾಧಿಕಾರಿ | ದಿನಾಂಕಃ 08.07.2025. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ಜೂನ್ 2021 ರಿಂದ ಇಲ್ಲಿಯವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.21.11.2021 ರಂದು ಚಾಸಾ-1 ರವರು ವಿಷ ಕುಡಿದ ಸಂಬಂಧವಾಗಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಹಾಜರಾಗಿದ್ದು, ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಸದರಿರವರ ಸ್ಟಮಕ್ ವಾಷ್ ನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ನಂತರ ಅವರನ್ನು ಹೆಚ್ಚುವರಿ ಚಿಕಿತ್ಸೆಗೆಂದು ಕಳುಹಿಸಿಕೊಟ್ಟಿರುತ್ತೇನೆ. ದಿ.07.04.2022 ರಂದು ಮೂಡಿಗೆರೆ ಪೋಲಿಸರು ಪತ್ರ ಬರೆದು ತಜ್ಞರ ವರದಿ ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಸೂಚಿಸಿದ್ದು ಸದರಿ ವರದಿಯನ್ನು ಪರಿಶೀಲಿಸಿದಾಗ ಚಾಸಾ-1 ರವರ ಸ್ಟಮಕ್ ವಾಷ್ ನಲ್ಲಿ Organophosphorus compound ಇರುವುದು ಪತ್ತೆಯಾಗಿರುತ್ತದೆ. ಈ ವಿಚಾರವಾಗಿ ನನ್ನ ಅಂತಿಮ ಅಭಿಪ್ರಾಯ ನೀಡಿರುತ್ತೇನೆ. ಈಗ ನೋಡುತ್ತಿರುವ ಎಂ.ಒ.3 ರಲ್ಲಿ Organophosphorus compound ಎಂಬ ಅಂಶ ಇರುತ್ತದೆ.

ಸಾಕ್ಷಿಯು ದಿ.14.01.2022 ರ ಗಾಯದ ಪ್ರಮಾಣಪತ್ರ, ದಿ.07.04.2022 ರ ಪತ್ರ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-11 ರಿಂದ 13, ಸಾಕ್ಷಿಯ ಸಹಿಗಳನ್ನು ನಿಪಿ-11(ಎ) ರಿಂದ 13(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಚಾಸಾ-1 ರವರೊಂದಿಗೆ ಚಾಸಾ-2 ರವರೂ ಸಹಾ ಆಸ್ಪತ್ರೆಗೆ ಬಂದಿದ್ದರು. ಯಾವ ಉದ್ದೇಶಕ್ಕಾಗಿ ವಿಷ ಕುಡಿದಿರುವುದಾಗಿ ಚಾಸಾ-1 ರವರು ನನ್ನ ಬಳಿ ಹೇಳಿಲ್ಲ. ಈ ವಿಚಾರವಾಗಿ ಚಾಸಾ-2 ರವರೂ ಸಹಾ ಏನನ್ನೂ ಹೇಳಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.